DCBC – 201

## II Semester B.Com. Examination, October/November 2022
## (NEP Scheme)
## COMMERCE
## Paper – 2.1 : Advanced Financial Accounting

Time : 2½ Hours                                                                 Max. Marks : 60

***Instruction :*** *Answer should be written* ***compulsorily*** *either in* ***English*** *or in* ***Kannada****.*

### SECTION – A

1. Answer **any five** sub-questions. **Each** sub-question carries **two** marks. **(5×2=10)**
   a) What do you mean by overriding commission ?
   b) Write two features of joint venture.
   c) What is Minimum Rent ?
   d) Mention the methods of calculating purchase consideration.
   e) What is proforma invoice ?
   f) What is Royalty ?
   g) Write any one difference between joint venture and partnership.

### SECTION – B

Answer **any three** questions. **Each** question carries **four** marks. **(3×4=12)**

2. Write four differences between joint venture and consignment.

3. A, B and C entered into a joint venture to construct a building. The contract price is Rs. 1,00,000. A, B and C were invested Rs. 40,000, Rs. 20,000 and Rs. 20,000 respectively and a joint bank account was opened. They purchased materials for Rs. 60,000. 'A' paid architects fees of Rs. 1,000. 'B' paid for sundry expenses of Rs. 2,000 and 'C' paid for cement expenses of Rs. 4,000. The contract was duly carried out. All the transactions were done through Joint Bank A/c.

   You are required to prepare Joint Venture Account when separate set of books are maintained. They share profits and losses equally.

4. Ahuja Ltd. had taken on lease of mine on a royalty of Rs. 5 per ton of iron ore raised with a minimum rent of Rs. 20,000 p.a. and power to recoup short workings during the first 3 years. The production was as under :

   $1^{st}$ year : 1000 tons, $2^{nd}$ year : 2400 tons, $3^{rd}$ year : 4000 tons.

   Prepare a royalty analytical table.

P.T.O.

5. Calculate Purchase Consideration from the following details :
   a) The purchasing company has agreed to issue 30000 equity shares of Rs. 10 each at a premium of 10%.
   b) 1000 preference shares of Rs. 100 each at par.
   c) 1000, 6% debentures of Rs. 100 each.
   d) Pay cash of Rs. 50,000.

6. 'A' consigned 200 kgs of Mango to 'B'. The cost being Rs. 50 per kg. 'A' incurred carriage charges of Rs. 5,000. 20% of the goods consigned were lost in transit due to accident. Calculate Abnormal Loss.

## SECTION – C

Answer **any three** questions. **Each** question carries **ten** marks. **(3×10=30)**

7. Swathi oil mills of Bombay consigned 10000 kgs of coconut oil to David of Bangalore on 1-4-2021. The cost of oil was Rs. 20 per kg.

   The Swathi oil mills paid Rs. 5,000 as freight and insurance. During transit 250 kgs were destroyed for which the insurance company paid Rs. 4,500. David took a delivery of the consignment on $10^{th}$ April 2021. David reported that 7500 kgs were sold at Rs. 30 per kg. The expenses being godown rent Rs. 200, advertisement Rs. 1,000 and salesman salary Rs. 2,000. David is entitled to a commission of 3%.

   Prepare necessary Ledger Accounts in the books of Consignor when separate books are maintained.

8. A, B and C entered into a joint venture to share profits and losses in 3 : 2 : 1. No separate set of books are maintained. Amount contributed and received by different venturers are as follows :

| **Particulars** | **A** | **B** | **C** |
|---|---|---|---|
| a) Cost of materials | Rs. 20,000 | Rs. 25,000 | Rs. 5,000 |
| b) Expenses | Rs. 3,000 | Rs. 4,000 | Rs. 7,000 |
| c) Sale proceeds received | Rs. 30,000 | Rs. 40,000 | Rs. 50,000 |
| d) Stock taken over | Rs. 2,000 | Rs. 3,000 | Rs. 5,000 |

**Prepare** : a) Memorandum Joint Venture Account.

b) Joint Venture with accounts in the books of all the three venturers.

9. Dr. Murthy wrote a Financial Accounting and got it published with Kalyani Publishers. On the terms that royalty will be paid at Rs. 5 per copy sold. Subject to a minimum rent of Rs. 15,000 p.a. with a right to recoupment of shortworkings over the first 3 years of Royalty agreement. The details are as follows :

| **Year** | 2019 | 2020 | 2021 |
|---|---|---|---|
| **No. of copies sold** | 1,500 | 4,000 | 5,000 |

**Prepare :** a) Minimum Rent A/c.

b) Shortworkings account.

c) Royalty A/c in the books of Kalyani Publishers.

10. Set out below is the Balance Sheet as on 31-12-2021 of X and Y, who share Profits and Losses in the ratio of their capitals.

| **Liabilities** | **Amount Rs.** | **Assets** | **Amount Rs.** |
|---|---|---|---|
| Creditors | 55,000 | Cash | 4,500 |
| Reserve fund | 7,000 | Debtors | 40,000 |
| Capitals : | | Stock | 37,000 |
| X : 75,000 | | Plant | 85,000 |
| Y : 50,000 | 1,25,000 | Investment | 20,500 |
| | **1,87,000** | | **1,87,000** |

The firm was sold to a limited company on the following terms :

a) The company was to purchase the whole concern except cash.

b) The creditors were takenover at the book value.

c) The company agreed to pay Rs. 5,000 for goodwill.

d) The purchase price was paid half in cash and half in fully paid shares of the company.

Calculate Purchase Consideration under Net Assets method and Prepare :

a) Realisation Account.

b) Partners Capital Account.

c) Cash Account.

11. Following is the Balance Sheet of A and B as on 31-03-2021.

| Liabilities | Amount Rs. | Assets | Amount Rs. |
|---|---|---|---|
| Current Liabilities | 30,000 | Fixed Assets | 1,00,000 |
| General Reserve | 36,000 | Stock | 60,000 |
| Capitals : | | Debtors | 24,000 |
| A = 1,00,000 | | Bills receivables | 20,000 |
| B = 64,000 | 1,64,000 | Cash at Bank | 26,000 |
| | **2,30,000** | | **2,30,000** |

'P' Ltd. acquired the business on the above date and the terms were :

a) Fixed assets to be valued at 20% more than the book value.

b) Stock to be valued at 90% of book value.

c) The purchase consideration was to be settled by the issue of 20,000 equity share of Rs. 10 each and balance in cash.

Pass the Opening Journal Entries and Opening Balance Sheet in the books of 'P' Ltd.

## SECTION – D

Answer **any one** of the following. **(1×8=8)**

12. Prepare a proforma invoice with imaginary figures.

13. Identify the areas of business where joint ventures are found.

## ಕನ್ನಡ ಅವೃತ್ತಿ

### ಭಾಗ – ಎ

1. ಯಾವುದಾದರೂ ಐದು ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉಪ-ಪ್ರಶ್ನೆಗೆ ಎರಡು ಅಂಕಗಳು. **(5×2=10)**

a) ಓವರ್‌ರೈಡಿಂಗ್ ಕಮಿಷನ್ ಎಂದರೇನು ?

b) ಜಂಟಿ ಉದ್ಯಮದ ಎರಡು ವೈಶಿಷ್ಟ್ಯಗಳನ್ನು ಬರೆಯಿರಿ.

c) ಕನಿಷ್ಟ ಬಾಡಿಗೆ ಎಂದರೇನು ?

d) ಖರೀದಿ ಪರಿಗಣನೆಯನ್ನು ಲೆಕ್ಕಾಚಾರ ಮಾಡುವ ವಿಧಾನಗಳನ್ನು ಹೆಸರಿಸಿ.

e) ಮಾದರಿ ಸರಕು ಪಟ್ಟಿ ಎಂದರೇನು ?

f) ರಾಯಧನ ಎಂದರೇನು ?

g) ಜಂಟಿ ಉದ್ಯಮ ಹಾಗೂ ಪಾಲುದಾರಿಕೆ ನಡುವಿನ ಯಾವುದಾದರೂ ಒಂದು ವ್ಯತ್ಯಾಸವನ್ನು ಬರೆಯಿರಿ.

## ಭಾಗ - ಬಿ

ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ನಾಲ್ಕು ಅಂಕಗಳು. **(3×4=12)**

2. ರವಾನೆ ಒಪ್ಪಂದ ಹಾಗೂ ಜಂಟಿ ಉದ್ಯಮದ ನಡುವಿನ ಯಾವುದಾದರೂ ನಾಲ್ಕು ವ್ಯತ್ಯಾಸಗಳನ್ನು ಬರೆಯಿರಿ.

3. 'ಎ', 'ಬಿ' ಮತ್ತು 'ಸಿ' ಎಂಬ ಪಾಲುದಾರರು ಜಂಟಿ ಉದ್ಯಮದ ಮೂಲಕ ಒಂದು ಕಟ್ಟಡ ಕಾಮಗಾರಿ ಒಪ್ಪಂದಕ್ಕೆ ಸಹಿ ಹಾಕುವರು. ಈ ಕಟ್ಟಡ ಕಾಮಗಾರಿಯ ಒಟ್ಟು ಮೌಲ್ಯ ರೂ. 1,00,000. ಅದಕ್ಕಾಗಿ ಇವರು ಜಂಟಿ ನಗದು ಖಾತೆಯನ್ನು ತೆರೆದು ಅದಕ್ಕೆ 'ಎ' ರೂ. 40,000, 'ಬಿ' ರೂ. 20,000 ಮತ್ತು 'ಸಿ' ರೂ. 20,000 ಹಣ ಹೂಡುವರು. ಇವರು ತಮ್ಮ ವ್ಯವಹಾರಕ್ಕಾಗಿ ರೂ. 60,000 ಮೌಲ್ಯದ ಸರಕು ಖರೀದಿಸುವರು. 'ಎ' ಎಂಬುವವರು ರೂ. 1,000ವನ್ನು ಕಟ್ಟಡ ವಿನ್ಯಾಸಕ್ಕಾಗಿ ಒಪ್ಪಿರುವರು 'ಬಿ' ಎಂಬುವವರು ರೂ. 2,000ವನ್ನು ಇತರೆ ಖರ್ಚುಗಳಿಗೆ ಮೀಸಲಿಟ್ಟಿದ್ದು, 'ಸಿ' ಎಂಬುವವರು ರೂ. 4,000ಗಳನ್ನು ಸಿಮೆಂಟ್ ಖರ್ಚಿಗೆ ವಿನಿಯೋಗಿಸುವರು. ಕಟ್ಟಡ ನಿರ್ಮಾಣ ಕೆಲಸವು ಮುಗಿದಿದ್ದು, ಒಪ್ಪಂದದ ಮೊಬಲಗು ಸ್ವೀಕರಿಸಲಾಗಿದೆ. ಈ ಅಂಶಗಳ ಆಧಾರದ ಮೇಲೆ ಎಲ್ಲಾ ರೀತಿಯ ಲೆಕ್ಕಗಳನ್ನು ತಯಾರಿಸುವ ವಿಧಾನದ ಮೇರೆಗೆ ಜಂಟಿ ಉದ್ಯಮ ಖಾತೆಯನ್ನು ತಯಾರಿಸಿರಿ. ಇವರು ತಮ್ಮ ಲಾಭಾಂಶ ಮತ್ತು ನಷ್ಟವನ್ನು ಸರಿಸಮವಾಗಿ ಹಂಚಿಕೊಳ್ಳಲು ಒಪ್ಪಿರುತ್ತಾರೆ.

4. ಅಹುಜ ಕಂಪನಿಯವರು ಗಣಿಗಾರಿಕೆಯ ಗುತ್ತಿಗೆ ಪಡೆದಿದ್ದು, ಈ ಒಪ್ಪಂದದ ಪ್ರಕಾರ ಒಂದು ಟನ್ ಉತ್ಪಾದನೆಯ ಮೇಲೆ ರೂ. 5ರಂತೆ ರಾಯಧನವನ್ನು ತೀರ್ಮಾನಿಸಲಾಗಿದೆ. ಹಾಗೆಯೇ ವಾರ್ಷಿಕ ಕನಿಷ್ಠ ಬಾಡಿಗೆ ರೂ. 20,000ಗಳಿಗೆ ತೀರ್ಮಾನಿಸಲಾಗಿದೆ ಮತ್ತು ಶಾರ್ಟ್‌ವರ್ಕಿಂಗ್ ಅನ್ನು ಹಿಂಪಡೆಯಲು ಮೂರು ವರ್ಷಗಳ ಕಾಲಾವಕಾಶ ನೀಡಲಾಗಿದ್ದು, ಉತ್ಪಾದನೆಯ ವಿವರ ಇಂತಿದೆ.

   1 ವರ್ಷ : 1000 ಟನ್‌ಗಳು, 2 ವರ್ಷ : 2400 ಟನ್‌ಗಳು, 3 ವರ್ಷ : 4000 ಟನ್‌ಗಳು.

   ಈ ವಿಷಯಗಳ ಆಧಾರದ ಮೇರೆಗೆ ರಾಯಧನ ವಿವರಗಳ ಪಟ್ಟಿಯನ್ನು ತಯಾರಿಸಿರಿ.

5. ಈ ಕೆಳಕಂಡ ವಿವರಗಳ ಆಧಾರದ ಮೇರೆಗೆ ಖರೀದಿ ಪರಿಗಣನೆಯನ್ನು ಲೆಕ್ಕ ಹಾಕಿರಿ.

   a) ಒಂದು ಖರೀದಿ ಸಂಸ್ಥೆಯು ರೂ. 10 ಮುಖಬೆಲೆಯ 30000 ಸಾಮಾನ್ಯ ಶೇರುಗಳನ್ನು ಶೇ. 10 ಪ್ರೀಮಿಯಂಗೆ ನೀಡಿದೆ.

   b) 100 ರೂ. ಮುಖಬೆಲೆಯ 1000 ಪ್ರಥಮ ಪ್ರಾಶಸ್ತ್ಯದ ಶೇರುಗಳನ್ನು ನೀಡಿದೆ.

   c) 100 ರೂ. ಮುಖಬೆಲೆಯ ಶೇ. 6ರ, 1000 ಸಾಲಪತ್ರಗಳನ್ನು ನೀಡಿದೆ.

   d) ನಗದಿನಲ್ಲಿ 50,000 ರೂ.ಗಳು.

6. 'ಎ' ಎಂಬುವವರು 'ಬಿ' ಎಂಬುವವರಿಗೆ 200 ಕೆ.ಜಿ. ಮಾವಿನ ಹಣ್ಣುಗಳನ್ನು ರವಾನಿಸಿದ್ದಾರೆ. ಅವುಗಳ ಬೆಲೆ ಪ್ರತಿ ಕೆಜಿಗೆ 50 ರೂಪಾಯಿಗಳು. 'ಎ' ಇವರು ಸಾಗಾಣಿಕೆ ಖರ್ಚು ರೂ. 5,000 ಗಳನ್ನು ಭರಿಸಿರುತ್ತಾರೆ. ಆದರೆ ಇದರಲ್ಲಿ ಶೇ. 20 ರಷ್ಟು ಅಪಘಾತದಿಂದ ನಷ್ಟ ಹೊಂದಿರುತ್ತವೆ. ಈ ವಿಷಯಗಳ ಆಧಾರದ ಮೇರೆಗೆ ಅನಿಯಂತ್ರಿತ ನಷ್ಟವನ್ನು ಕಂಡುಹಿಡಿಯಿರಿ.

## ಭಾಗ - ಸಿ

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿಯೊಂದು ಪ್ರಶ್ನೆಗೆ ಹತ್ತು** ಅಂಕಗಳು. **(3×10=30)**

7. ದಿನಾಂಕ 1-4-2021ರಂದು ಬಾಂಬೆಯ ಸ್ವಾತಿ ಆಯಿಲ್ ಮಿಲ್‌ರವರು ಬೆಂಗಳೂರಿನ ಡೇವಿಡ್‌ರವರಿಗೆ 10000 ಕೆ.ಜಿ. ಕೊಬ್ಬರಿ ಎಣ್ಣೆಯನ್ನು ರವಾನಿಸಿದೆ. ಪ್ರತಿ ಕೆ.ಜಿ. ಎಣ್ಣೆಯ ಬೆಲೆ ರೂ. 20ಗಳು. ಸ್ವಾತಿ ಆಯಿಲ್ ಮಿಲ್‌ರವರು ಸಾಗಾಣಿಕಾ ವೆಚ್ಚ ಮತ್ತು ವಿಮಾ ಖರ್ಚು ಸೇರಿ ರೂ. 5,000 ವ್ಯಯಿಸಿದೆ. ಮಾರ್ಗ ಮಧ್ಯದಲ್ಲಿ ಸಾಗಾಣಿಕೆಯ ಸಮಯದಲ್ಲಿ 250 ಕೆಜಿಯಷ್ಟು ಎಣ್ಣೆಯು ನಷ್ಟವಾಗಿದೆ. ಆದರೆ ವಿಮಾ ಕಂಪನಿಯು ಅದಕ್ಕೆ ಪ್ರತಿಯಾಗಿ ರೂ. 4,500 ಗಳನ್ನು ಪರಿಹಾರವಾಗಿ ನೀಡಿದೆ.

   10-4-2021ರಂದು ಡೇವಿಡ್‌ರವರು ರವಾನೆಯಾದ ಸರಕನ್ನು ಸ್ವೀಕರಿಸಿ ನಂತರ 7500 ಕೆಜಿಯಷ್ಟು ಎಣ್ಣೆಯನ್ನು ರೂ. 30 ರಂತೆ ಪ್ರತಿ ಕೆಜಿಗೆ ಮಾರಾಟ ಮಾಡಿರುತ್ತಾರೆ. ಹಾಗೆಯೇ ಉಗ್ರಾಣ ಬಾಡಿಗೆ ರೂ. 200, ಜಾಹಿರಾತು ಖರ್ಚು ರೂ. 1,000 ಮತ್ತು ಮಾರಾಟ ಮಾಡುವವರ ಸಂಭಾವನೆ ಬಾಬ್ತು ರೂ. 2,000ಗಳನ್ನು ವ್ಯಯಿಸಿರುತ್ತಾರೆ. ಇವರು ತಮ್ಮ ಸೇವೆಗೆ ಸಾಮಾನ್ಯ ಕಮಿಷನ್ 3% ಪಡೆಯಲಿದ್ದಾರೆ.

   ಈ ಮೇಲ್ಕಂಡ ಮಾಹಿತಿಯಿಂದ ರವಾನೆದಾರರ ಪುಸ್ತಕದಲ್ಲಿ ಅಗತ್ಯವಿರುವ ಲೆಡ್ಜರ್ ಖಾತೆಗಳನ್ನು ಬರೆಯಿರಿ.

8. ಎ, ಬಿ ಮತ್ತು ಸಿ ಮೂರು ಜನರು ಒಂದು ಜಂಟಿ ಉದ್ಯಮದಲ್ಲಿ ತೊಡಗಿಸಿಕೊಂಡು ತಮ್ಮ ಲಾಭಾಂಶ ಮತ್ತು ನಷ್ಟವನ್ನು 3 : 2 : 1ರ ಅನುಪಾತದಲ್ಲಿ ಹಂಚಿಕೊಳ್ಳಲು ಒಪ್ಪಿರುತ್ತಾರೆ. ಪ್ರತ್ಯೇಕವಾದ ಪುಸ್ತಕಗಳನ್ನು ತಯಾರಿಸದ ಇವರು ಈ ಜಂಟಿ ಉದ್ಯಮಕ್ಕೆ ಪಾವತಿಸಿದ ಹಣದ ವಿವರ ಮತ್ತು ಇತರೆ ವಿವರಗಳು ಈ ಕೆಳಕಂಡಂತಿವೆ.

| ವಿವರಗಳು | ಎ | ಬಿ | ಸಿ |
|---|---|---|---|
| a) ಸರಕುಗಳ ವೆಚ್ಚ | ರೂ. 20,000 | ರೂ. 25,000 | ರೂ. 5,000 |
| b) ಖರ್ಚುಗಳು | ರೂ. 3,000 | ರೂ. 4,000 | ರೂ. 7,000 |
| c) ಮಾರಾಟದ ಹಣ ಸ್ವೀಕರಿಸಿರುವುದು | ರೂ. 30,000 | ರೂ. 40,000 | ರೂ. 50,000 |
| d) ಪಡೆದುಕೊಂಡ ಸ್ಟಾಕು | ರೂ. 2,000 | ರೂ. 3,000 | ರೂ. 5,000 |

   ಈ ವಿಷಯಗಳ ಆಧಾರದ ಮೇರೆಗೆ :

   a) ಜ್ಞಾಪಕ ಪತ್ರ, ಜಂಟಿ ಉದ್ಯಮಖಾತೆ

   b) ಮೂರು ಜನ ಉದ್ಯಮಿಗಳ ಪುಸ್ತಕದಲ್ಲಿ ಜಂಟಿ ಉದ್ಯಮ ಖಾತೆಯನ್ನು ಬರೆಯಿರಿ.

9. ಡಾ II ಮೂರ್ತಿರವರು ಹಣಕಾಸು ಲೆಕ್ಕಶಾಸ್ತ್ರ ಪುಸ್ತಕವನ್ನು ಬರೆದು ಅದನ್ನು ಕಲ್ಯಾಣಿ ಪಬ್ಲಿಕೇಷನ್‌ರವರು ಪ್ರಕಟಿಸಿರುತ್ತಾರೆ. ಆದರೆ ಈ ಷರತ್ತುಗಳ ಆಧಾರದ ಮೇಲೆ ಒಪ್ಪಲಾಗಿದೆ. ಅದರಂತೆ ರಾಯಧನ ಪ್ರತಿ ಪುಸ್ತಕದ ಮಾರಾಟದ ಮೇಲೆ ರೂ. 5 ರಂತೆ ನಿಗದಿಪಡಿಸಲಾಗಿದೆ. ಕನಿಷ್ಟ ಬಾಡಿಗೆ ರೂಪದ ಹಣ ವರ್ಷಕ್ಕೆ ರೂ. 15,000ಗಳು ಹಾಗೆಯೇ ಶಾರ್ಟ್‌ವರ್ಕಿಂಗ್‌ಅನ್ನು ಮರುಪಾವತಿ ಅಥವಾ ಹಿಂಪಡೆಯುವ ಹಕ್ಕು 3 ವರ್ಷಗಳು, ಇತರ ವಿಷಯಗಳು ಈ ಕೆಳಕಂಡಂತಿವೆ.

| ವರ್ಷ | 2019 | 2020 | 2021 |
|---|---|---|---|
| ಮಾರಾಟದ ಪ್ರತಿಗಳು | 1,500 | 4,000 | 5,000 |

ಈ ಮೇಲ್ಕಂಡ ವಿಷಯಗಳ ಆಧಾರದ ಮೇರೆಗೆ ಕಲ್ಯಾಣಿ ಪಬ್ಲಿಕೇಶನ್‌ರವರ ಪುಸ್ತಕದಲ್ಲಿ ಈ ಕೆಳಕಂಡ ಖಾತೆಗಳನ್ನು ಬರೆಯಿರಿ.

a) ಕನಿಷ್ಟ ಬಾಡಿಗೆ ಖಾತೆ.

b) ಶಾರ್ಟ್‌ವರ್ಕಿಂಗ್ ಖಾತೆ.

c) ರಾಯಧನ ಖಾತೆ.

10. 31-12-2021 ರ ಪ್ರಕಾರ ಎಕ್ಸ್ ಮತ್ತು ವೈ ರವರ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿ ಈ ಕೆಳಕಂಡಂತಿದೆ. ಇವರು ತಮ್ಮ ಲಾಭ ಮತ್ತು ನಷ್ಟವನ್ನು ತಮ್ಮ ಬಂಡವಾಳದ ಅನುಪಾತದಲ್ಲಿ ಹಂಚಿಕೊಳ್ಳುವರು. ಇವರ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿ ಮತ್ತು ಇತರೆ ವಿವರಗಳು :

| ಹೊಣೆಗಾರಿಕೆಗಳು | ರೂ. | ಆಸ್ತಿಗಳು | ರೂ. |
|---|---|---|---|
| ಧಣಿಗಳು | 55,000 | ನಗದು ಹಣ | 4,500 |
| ಮೀಸಲು ಹಣ | 7,000 | ಋಣಿಗಳು | 40,000 |
| ಬಂಡವಾಳ : | | ಸ್ಟಾಕುಗಳು | 37,000 |
| ಎಕ್ಸ್ : 75,000 | | ಯಂತ್ರ ಸಾಮಗ್ರಿ | 85,000 |
| ವೈ : 50,000 | 1,25,000 | ಹೂಡಿಕೆಗಳು | 20,500 |
| | **1,87,000** | | **1,87,000** |

ಈ ಪಾಲುದಾರಿಕೆ ಸಂಸ್ಥೆಯು ಒಂದು ಸಂಯುಕ್ತ ಬಂಡವಾಳ ಸಂಸ್ಥೆಗೆ ಈ ಕೆಳಕಂಡ ನಿಬಂಧನೆಗಳೊಂದಿಗೆ ಮಾರಾಟವಾಗಲಿದೆ :

a) ಕಂಪನಿಯು ಪಾಲುದಾರಿಕೆ ಸಂಸ್ಥೆಯ ಎಲ್ಲಾ ಆಸ್ತಿಗಳನ್ನು ಖರೀದಿಸಿದೆ (ನಗದನ್ನು ಹೊರತುಪಡಿಸಿ).

b) ಧಣಿಗಳನ್ನು ತಮ್ಮ ಮೂಲಬೆಲೆಗೆ ಪಡೆಯುವುದು.

c) ಕಂಪನಿಯು ರೂ. 5,000 ಗಳನ್ನು ಸುನಾಮ ರೂಪದಲ್ಲಿ ನೀಡುವುದು.

d) ಖರೀದಿ ಬೆಲೆಯನ್ನು ಸಂಸ್ಥೆಯು ಸಮಪಾಲು ನಗದು ಮತ್ತು ಪೂರ್ಣ ಪಾವತಿಯಾದ ಶೇರುಗಳ ರೂಪದಲ್ಲಿ ನೀಡಿದೆ.

ಈ ಮೇಲ್ಕಂಡ ವಿಷಯಗಳ ಆಧಾರದ ಮೇರೆಗೆ ಪಾಲುಗಾರಿಕೆ ಸಂಸ್ಥೆಯ ಪುಸ್ತಕದಲ್ಲಿ :

a) ವಿಲೇವಾರಿ ಖಾತೆ.

b) ಪಾಲುದಾರರ ಬಂಡವಾಳ ಖಾತೆ ಮತ್ತು

c) ನಗದು ಖಾತೆಯನ್ನು ತಯಾರಿಸಿ.

11. ದಿನಾಂಕ 31-03-2021 ರ ಪ್ರಕಾರ ಎ ಮತ್ತು ಬಿ ಇವರ ಪಾಲುಗಾರಿಕೆ ಸಂಸ್ಥೆಯ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿ ಈ ಕೆಳಗಿನಂತಿದೆ.

| **ಹೊಣೆಗಾರಿಕೆಗಳು** | | **ರೂ.** | **ಆಸ್ತಿಗಳು** | **ರೂ.** |
|---|---|---|---|---|
| ಚಾಲ್ತಿ ಹೊಣೆಗಾರಿಕೆಗಳು | | 30,000 | ಸ್ಥಿರ ಆಸ್ತಿಗಳು | 1,00,000 |
| ಸಾಮಾನ್ಯ ಮೀಸಲು | | 36,000 | ಸ್ಟಾಕುಗಳು | 60,000 |
| ಬಂಡವಾಳಗಳು : | | | ಋಣಿಗಳು | 24,000 |
| ಎ = | 1,00,000 | | ಸ್ವೀಕರಿಸಲಾದ ಹುಂಡಿ | 20,000 |
| ಬಿ = | 64,000 | 1,64,000 | ಬ್ಯಾಂಕಿನಲ್ಲಿನ ಹಣ | 26,000 |
| | | **2,30,000** | | **2,30,000** |

'ಪಿ' ಸಂಸ್ಥೆಯು ಈ ಪಾಲುಗಾರಿಕೆ ಸಂಸ್ಥೆಯ ವ್ಯವಹಾರವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಖರೀದಿಸುವುದು.

a) ಸ್ಥಿರ ಆಸ್ತಿಗಳನ್ನು ಮೂಲ ಬೆಲೆಯ ಶೇ. 20 ರಷ್ಟು ಹೆಚ್ಚಳಕ್ಕೆ ಮೌಲ್ಯೀಕರಿಸುವುದು.

b) ಸ್ಟಾಕನ್ನು ತನ್ನ ಮೂಲ ಬೆಲೆಯ ಶೇ. 90ಕ್ಕೆ ಮೌಲ್ಯೀಕರಿಸುವುದು.

c) ಖರೀದಿ ಮೊತ್ತವನ್ನು ರೂ. 10 ಮುಖಬೆಲೆಯ 20,000 ಸಾಮಾನ್ಯ ಶೇರುಗಳನ್ನು ಬಿಡುಗಡೆಗೊಳಿಸುವುದು ಮತ್ತು ಬಾಕಿಯನ್ನು ನಗದು ರೂಪದಲ್ಲಿ ನೀಡುವುದು.

ಈ ವಿಷಯಗಳ ಆಧಾರದ ಮೇಲೆ ಪ್ರಾರಂಭಿಕ ಜರ್ನಲ್ ನಮೂದು ಮತ್ತು ಪ್ರಾರಂಭಿಕ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು 'ಪಿ' ಸಂಸ್ಥೆಯ ಪುಸ್ತಕದಲ್ಲಿ ಬರೆಯಿರಿ.

## ಭಾಗ – ಡಿ

ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. **(1×8=8)**

12. ರವಾನೆ ಒಪ್ಪಂದದ ಸರಕುಪಟ್ಟಿ ಮಾದರಿ ಸ್ವರೂಪವನ್ನು ತಯಾರಿಸಿರಿ.

13. ಜಂಟಿ ಉದ್ಯಮಗಳು ರೂಪುಗೊಂಡ ವ್ಯಾಪಾರದ ಕ್ಷೇತ್ರಗಳನ್ನು ಗುರ್ತಿಸಿ ಟಿಪ್ಪಣಿ ಬರೆಯಿರಿ.